ರಾಜಶ್ರೀ ಟಿ. ರೈ ಪೆರ್ಲ

ಕಲೆ: ಎಸ್.ವಿ. ಹೂಗಾರ

# ಮರಣದಂಡ



“ನಮ್ಮ ತೋಟದ ಮೂಲೆಯಲ್ಲಿ ಇರುವ ಬಿದಿರಿನ ದೊಡ್ಡ ಪೊದೆಯಲ್ಲಿ ಯಾವ ಸೈಜಿನ ಕೋಲು ಬೇಕಾದರೂ ತಯಾರಿಸಬಹುದು. ಒಂದನ್ನು ಮುಟ್ಟಿ ಆಯ್ಕೆ ಮಾಡಿ ತೋರಿಸಿದರೆ ಸಾಕು, ಕೆಲಸದಾಳು ಕಿಟ್ಟು ಕಡಿದು ಗೀಸಿ, ಉದ್ದ ಗಿಡ್ಡ ಎಷ್ಟು ಬೇಕೋ ಹಾಗೆ ಮಾಡಿಕೊಡುವುದಿಲ್ಲವಾ! ಅದಕ್ಕೆ ಇಷ್ಟು ರಂಪ ರಾಮಾಯಣ ಯಾಕೆ? ಒಂದು ಕೋಲಿನ ದೆಸೆಯಿಂದ ಮನೆಯಲ್ಲಿ ಬೆಳಗಿಂದ ಯಾರೂ ಅನ್ನ ನೀರು ಸರಿಯಾಗಿ ಗಂಟಲಲ್ಲಿ ಇಳಿಸಿಕೊಳ್ಳೋಕೆ ಆಗಿಲ್ಲ. ಈ ಪ್ರಾಯ ಹೋದ ಹಾಗೆ ಚರ್ಮ ಒರಟಾದರೂ ತೊಂದರೆಯಿಲ್ಲ, ಸ್ವಭಾವ ಒರಟಾಗದಿದ್ದರೆ ಸಾಕು.” ಶೇಖರ ವಟಗುಟ್ಟುತ್ತಾ ಅನ್ನದ ತಟ್ಟೆಯ ಎದುರು ಕುಳಿತರೆ, ಅವನ ಹೆಂಡತಿ ರುಕ್ಮಿಣಿ ಮಾತ್ರ ಅತ್ತೆ ಮಾವನಿಗೆ ಈ ಮಾತುಗಳೆಲ್ಲಾ ಎಲ್ಲಿ ಕೇಳುತ್ತದೋ ಎಂಬ ಭೀತಿಯಿಂದ ಮೆಲ್ಲ ಕೈಸಾಲೆಯ ಬಾಗಿಲು ದೂಡಿ ವಾರೆ ಮಾಡಿದಳು. ಅವಳ ಈ ನಡೆಯನ್ನು ಶೇಖರ ಗಮನಿಸಿಯೂ ಗಮನಿಸದಂತೆ ಅನ್ನಕ್ಕೆ ಪದಾರ್ಥವನ್ನು ಮತ್ತೆ ಮತ್ತೆ ಸುರಿದುಕೊಂಡು ಹಿಂಡಿ ಉಂಡೆ ಕಟ್ಟತೊಡಗಿದ.

“ಪ್ರಾಯದವರು, ಸಣ್ಣ ಸಣ್ಣ ವಿಚಾರ ದೊಡ್ಡದು ಮಾಡುತ್ತಾರೆ. ಅವರಿಗೋ ತಾಳ್ಮೆ ಕಡಿಮೆ ಆಗಿರುತ್ತೆ. ಅದಕ್ಕೆ ನಾವೂ ಹೀಗೆ ಕೂಗಾಡಬೇಕಾ?... ಅಷ್ಟಕ್ಕೂ ಅವರೇನೂ ದೊಡ್ಡ ಚಿನ್ನ ಬೆಳ್ಳಿ ತಂದುಕೊಡಿ ಅಂತ ರಂಪಾಟ ಮಾಡಿದ್ರಾ? ಅವರ ಊರುಗೋಲು ತಾನೇ. ಅದಿಲ್ಲದೆಯೂ ನಡೆಯುವುದಕ್ಕೆ ಸಾಧ್ಯ ಅವರಿಗೆ. ಆದ್ರೂ ಪಾಪ, ಎಷ್ಟು ವರ್ಷದಿಂದ ಜೊತೆಗೇ ಇಟ್ಟುಕೊಂಡಿದ್ದಾರೆ. ಕಳೆದೋಯ್ತು